## ಬೆಳದಿಂಗಳ ಸಂಗೀತ 216

**14 ಸೆಪ್ಟಂಬರ್ 2019**

**ಕರ್ನಾಟಕ ಹಿಂದೂಸ್ತಾನಿ ಜುಗಲ್‌ಬಂದಿ**

**ವೀಣೆ**
**ವಿದ್ವಾನ್ ಆರ್.ಕೆ. ಪದ್ಮನಾಭ**

**ಹಾರ್ಮೋನಿಯಂ**
**ಡಾ. ರವೀಂದ್ರ ಗುರುರಾಜ್ ಕಾಟೋಟಿ**

**ಮೃದಂಗ**
**ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ**

**ತಬಲ**
**ಪಂ. ಉದಯರಾಜ್ ಕರ್ಪೂರ್**

ಫೋನ್: 0821-2548220, 2548221 * ಫ್ಯಾಕ್ಸ್: 0821-2548219 * ಇಮೇಲ್: jssashram@yahoo.com

# ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

**ಚಾಮುಂಡಿಬೆಟ್ಟದ ತಪ್ಪಲು, ಮೈಸೂರು**

# ಬೆಳದಿಂಗಳ ಸಂಗೀತ 215

**15 ಆಗಸ್ಟ್ 2019 * ಗುರುವಾರ * ಸಂಜೆ 6.00**

**ದಿವ್ಯ ಸಾನ್ನಿಧ್ಯ**
**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
**ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ**



**ಗಾಯನ**
**ವಿದ್ವಾನ್ ಪ್ರಸನ್ನ ವೆಂಕಟರಾಮನ್**



**ವಯೊಲಿನ್**
**ವಿದ್ವಾನ್ ಕೆ.ಜೆ. ದಿಲೀಪ್**



**ಮೃದಂಗ**
**ವಿದ್ವಾನ್ ಅರ್ಜುನ್ ಕುಮಾರ್**

**ವಿದ್ವಾನ್ ಪ್ರಸನ್ನ ವೆಂಕಟರಾಮನ್‌ರವರು** ಕರ್ನಾಟಕ ಸಂಗೀತದ ಜನಪ್ರಿಯ ಕಲಾವಿದರಲ್ಲೊಬ್ಬರು. ಮದರಾಸಿನ ಐಐಟಿಯ ಎಂ.ಟೆಕ್. ಪದವೀಧರರು. ಶ್ರೀಮತಿ ಟಿ.ಆರ್. ಬಾಲಾಮಣಿ ಮತ್ತು ಕಲಾನಿಧಿ ಶ್ರೀ ಟಿ.ಕೆ. ಗೋವಿಂದರಾವ್ ಬಳಿ ಸಂಗೀತದ ಆರಂಭಿಕ ಅಧ್ಯಯನ ಮಾಡಿದರು. ಪ್ರಸ್ತುತ ಶ್ರೀ ಸಂಜಯ್ ಸುಬ್ರಹ್ಮಣ್ಯಂರವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಮದರಾಸಿನ ಮ್ಯೂಸಿಕ್ ಅಕ್ಯಾಡೆಮಿಯಿಂದ ನಾಲ್ಕು ಬಾರಿ "ಅತ್ಯುತ್ತಮ ಸಂಗೀತಗಾರ" ಪುರಸ್ಕಾರ, ಮುಂಬಯಿಯ ಷಣ್ಮುಖಾನಂದ ಸಭಾದ "ಷಣ್ಮುಖ ಸಂಗೀತ ಶಿರೋಮಣಿ ಪ್ರಶಸ್ತಿ", ಚೆನ್ನೈನ ಪಾರ್ಥಸಾರಥಿಸ್ವಾಮಿ ಸಭಾದ "ಎಂ.ಎಲ್. ವಸಂತಕುಮಾರಿ ಪ್ರಶಸ್ತಿ", ಭಾರತ್ ಕಲಾಚಾರ್ ಸಂಸ್ಥೆಯ "ಯುವ ಕಲಾಭಾರತಿ ಪ್ರಶಸ್ತಿ", ಕಾರ್ತಿಕ್ ಫೈನ್ ಆರ್ಟ್ಸ್‌ನವರ "ಇಸೈ ಪುಡರ್ ಪ್ರಶಸ್ತಿ" ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ "ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ್" ಮುಂತಾದ ಪ್ರತಿಷ್ಠಿತ ಸಮ್ಮಾನಗಳಿಗೆ ಭಾಜನರಾಗಿದ್ದಾರೆ.

ಆಕಾಶವಾಣಿಯ "ಎ" ಶ್ರೇಣಿ ಕಲಾವಿದರಾದ ಶ್ರೀ ಪ್ರಸನ್ನ ವೆಂಕಟರಾಮನ್‌ರವರು ದೇಶಾದ್ಯಂತ ಹಲವಾರು ಖ್ಯಾತ ವೇದಿಕೆಗಳಲ್ಲಿ ಮತ್ತು ಸಂಗೀತ ಸಮ್ಮೇಳನಗಳಲ್ಲಿ ಕಲಾರಸಿಕರನ್ನು ರಂಜಿಸಿದ್ದಾರೆ. ಉತ್ತರ ಅಮೆರಿಕ, ಕೆನಡ, ಸಿಂಗಪುರ, ಫ್ರಾನ್ಸ್, ದುಬೈಗಳಲ್ಲೂ ಸಂಗೀತಯಾನ ಮಾಡಿದ್ದಾರೆ.

**ವಿದ್ವಾನ್ ದಿಲೀಪ್‌ರವರು** ತಂದೆ ಶ್ರೀ ಕೆ.ಜೆ. ಶ್ಯಾಮಶರ್ಮ ಮತ್ತು ತಾತ ಶ್ರೀ ಕೆ.ಜೆ. ಕೃಷ್ಣಭಟ್‌ರವರಿಂದ ವಯೊಲಿನ್ ವಾದನದಲ್ಲಿ ಆರಂಭಿಕ ಮಾರ್ಗದರ್ಶನ ಪಡೆದರು. ಅನಂತರ ಸುಮಾರು ಆರು ವರ್ಷ ಕಾಲ ಪದ್ಮಭೂಷಣ ಸಂಗೀತ ಕಲಾನಿಧಿ ಎಂ.ಎಸ್. ಗೋಪಾಲಕೃಷ್ಣನ್‌ರವರ ಬಳಿ ಉನ್ನತ ಶಿಕ್ಷಣ ಪಡೆದರು. ಬಾಸ್ಟನ್ನಿನ ಬರ್ಕ್‌ಲಿ ಕಾಲೇಜ್ ಆಫ್ ಮ್ಯೂಸಿಕ್‌ನಲ್ಲಿ ಸಂಗೀತ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಎಂ.ಎಸ್. ಸುಬ್ಬಲಕ್ಷ್ಮಿ ವಿದ್ಯಾರ್ಥಿವೇತನ ಪಡೆದಿದ್ದಾರೆ. ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**ವಿದ್ವಾನ್ ಅರ್ಜುನ್‌ಕುಮಾರ್**ರವರು ಐದನೆಯ ವಯಸ್ಸಿನಿಂದಲೇ ಮೃದಂಗ ಕಲಿಯತೊಡಗಿದ ಪ್ರತಿಭಾಶಾಲಿಗಳು. ತಂದೆ ಶ್ರೀ ಕೆ. ಅರ್ಜುನ್‌ರವರ ಬಳಿ, ಅನಂತರ ವಿದ್ವಾನ್ ಟಿ.ಎ.ಎಸ್. ಮಣಿಯವರಲ್ಲಿ ಕೆಲವು ವರ್ಷ ಕಾಲ ಅಭ್ಯಾಸ ಮಾಡಿದರು. ಬಳಿಕ ಭಾರತ ಸರ್ಕಾರದ ಶಿಷ್ಯವೇತನ ಪಡೆದು ಡಾ. ಪದ್ಮವಿಭೂಷಣ ಉಮಯಾಳಪುರಂ ಕೆ. ಶಿವರಾಮನ್‌ರವರಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಇವರು ದತ್ತಪೀಠ ಆಸ್ಥಾನ ವಿದ್ವಾನ್ ಪ್ರಶಸ್ತಿ ಪುರಸ್ಕೃತರು.